30/05/2006

1	3330	65/47	7.20	8.30	Tyre puncture
2	947	5/7	8.00	9.05	Blade cut
3	658	75	8.15	9.00	Tyre puncture
4	838	91	8.00	9.00	Tyre puncture
5	806	152/153	10.00	11.00	Tyre puncture
6	733	110/45	10.10	12.15	Tyre puncture
7	2417	4	12.00	13.00	Tyre puncture
8	862	42/43	12.30	13.25	Tyre puncture

31/05/2006

1	862	42/43	7.30	8.00	Tyre puncture
2	658	75	8.25	9.15	Tyre puncture
3	959	28	13.30	14.20	Tyre puncture
4	928	19/20	15.10	16.00	Tyre puncture
5	961	93	19.00	19.30	Tyre puncture

1117 (1196) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಡ್ಲಿಗಿ ತಾಲ್ಲೂಕಿನಲ್ಲಿ ಮೂರು ಬಸ್ ನಿಲ್ದಾಣಗಳು ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈಗ ಈ ನಿಲ್ದಾಣಗಳ ಕಾಮಗಾರಿ ಯಾವ ಹಂತದಲ್ಲಿದೆ;

ಇ) ಇದಕ್ಕಾಗಿ ಒದಗಿಸಿದ ಅನುದಾನವೆಷ್ಟು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಕೇವಲ ಎರಡು ಬಸ್‌ನಿಲ್ದಾಣಗಳ ಕಾಮಗಾರಿ ಪ್ರಾರಂಭಗೊಂಡಿದೆ. ಅವುಗಳು:-

1) ಖಾನಾಹೊಸಹಳ್ಳಿ

2) ಉಜ್ಜಯನಿ

ಆ) ಖಾನಾಹೊಸಹಳ್ಳಿ ಬಸ್‌ನಿಲ್ದಾಣದ ಮುಖ್ಯ ಕಟ್ಟಡದ ಬೇಸ್‌ಮೆಂಟ್ ಕಾಮಗಾರಿ ಚಾಲ್ತಿಯಲ್ಲಿದ್ದು, ಶೌಚಾಲಯ ಪೂರ್ಣಗೊಳ್ಳುವ ಹಂತದಲ್ಲಿದೆ. ಉಜ್ಜಯನಿಯ ಬಸ್‌ನಿಲ್ದಾಣದ ಕಾಮಗಾರಿಗೆ ಲೈನ್ ಔಟ್ ನೀಡಲಾಗಿದ್ದು, ಆವರಣದ ನೆಲಸಮ ಮಾಡುವ ಕಾರ್ಯ ಪೂರ್ಣಗೊಂಡಿರುತ್ತದೆ.

ಇ) 1) ಖಾನಾಹೊಸಹಳ್ಳಿ – ರೂ. 25.00 ಲಕ್ಷಗಳು

2) ಉಜ್ಜಯನಿ – ರೂ. 14.60 ಲಕ್ಷಗಳು

ಮಾರ್ಚ್ 2007ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

1118 (937) ಶ್ರೀ ಆರ್. ಧ್ರುವನಾರಾಯಣ (ಸಂತೇಮರಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ: 31.03.2004 ರವರೆಗೆ ಸುಸ್ತಿಯಾದ ಎಲ್ಲಾ ರೈತ ಬಾಂಧವರಿಗೆ ಕೃಷಿ ಪತ್ತಿನ ಸಹಕಾರ ಸಂಘಗಳು, ಡಿ.ಸಿ.ಸಿ. ಬ್ಯಾಂಕುಗಳು, ಭೂ ಅಭಿವೃದ್ಧಿ ಬ್ಯಾಂಕುಗಳು ನೀಡಿರುವ ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿದ್ದರೂ ಸಹ ಧೀರ್ಘಾವಧಿ ಸಾಲದ ಮೇಲಿನ ಬಡ್ಡಿಯನ್ನು ಈಗಲೂ ಸಹ ಹಿಂದಿನ ಬಡ್ಡಿ ದರಕ್ಕೆ ಭೂ ಅಭಿವೃದ್ಧಿ ಬ್ಯಾಂಕುಗಳು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 2004–05ನೇ ಸಾಲಿನಲ್ಲಿ ಪಡೆದ ಸಾಲದ ಮೇಲಿನ ಬಡ್ಡಿಯನ್ನು ರದ್ದು ಮಾಡಿ ಎಲ್ಲಾ ರೈತರಿಗೂ ಎಲ್ಲಾ ಸಾಲಗಳ ಮೇಲಿನ ಬಡ್ಡಿಯನ್ನು ಒಂದೇ ರೀತಿಯಲ್ಲಿ ಅಳವಡಿಸುವುದು ಸರ್ಕಾರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಭೂ ಅಭಿವೃದ್ಧಿ ಬ್ಯಾಂಕುಗಳು ನೀಡಿರುವ ದೀರ್ಘಾವಧಿ ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿದ್ದಾಗ್ಯೂ ರೈತರಿಂದ ಹಿಂದಿನ ಬಡ್ಡಿ ದರದಲ್ಲಿ ಸಾಲ ವಸೂಲಿ ಮಾಡಿರುವ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಮತ್ತು ಇ) 2004–05ನೇ ಸಾಲಿನಲ್ಲಿ ನೀಡಿರುವ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ಪ್ರಸ್ತಾಪವು ಸರ್ಕಾರದ ಮುಂದೆ ಇಲ್ಲ. ದಿನಾಂಕ: 01.04.2006ರಿಂದ ಕೃಷಿ ಪತ್ತಿನ ಸಹಕಾರ ಸಂಘಗಳು / ಬ್ಯಾಂಕುಗಳು ರೈತರಿಗೆ ರೂ. 3.00 ಲಕ್ಷದ ವರೆಗೆ ಶೇಕಡಾ 4ರ ಬಡ್ಡಿ ದರದಲ್ಲಿ ಕೃಷಿ ಸಾಲಗಳನ್ನು ನೀಡುತ್ತಿವೆ.

1119 (938) ಶ್ರೀ ಆರ್. ಧ್ರುವನಾರಾಯಣ (ಸಂತೇಮರಳ್ಳಿ): ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರನಟ ಡಾ: ರಾಜ್‌ಕುಮಾರ್ ಅಂತ್ಯಕ್ರಿಯೆ ದಿನ ಬೆಂಗಳೂರು ನಗರದಲ್ಲಿ ನಡೆದ ಗಲಭೆಗೆ ಕಾರಣವೇನು?

ಆ) ಈ ಗಲಭೆಯಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು?

ಇ) ಈ ಗಲಭೆಯಲ್ಲಿ ಮೃತಪಟ್ಟ ಕುಟುಂಬದವರಿಗೆ ನೀಡಿರುವ ಪರಿಹಾರವೆಷ್ಟು?

ಈ) ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ದಿನಾಂಕ: 12.04.2006ರಂದು ಮಧ್ಯಾಹ್ನ ಕನ್ನಡದ ಮೇರುನಟ, ಪದ್ಮಭೂಷಣ ಡಾ: ರಾಜ್‌ಕುಮಾರ್ ರವರು ಅನಾರೋಗ್ಯದಿಂದ ಮೃತಪಟ್ಟಿರುತ್ತಾರೆ. ಮೃತರ ದೇಹವನ್ನು ಕಂಠೀರವ